


# ಬದುಕಿನ ಬೇರಿಗೆ ಚಿಗುರುವ ಭರವಸೆ

-ಮಂಜುಳಾ ಜಿ.ಎಚ್.,
ಸಹಾಯಕ ಪ್ರಾಧ್ಯಾಪಕಿ, ಲೇಖಕಿ

ಭಾರತ ದೇಶದಲ್ಲಿ ಬದುಕುತ್ತಿರುವ ನಮಗೆ ಕಟುವಾಗಿರುವ ವಾಸ್ತವ ಅರಿವಿಗೆ ಬರುವುದು ಒಂದು ವಂಚಿತ ಸಮುದಾಯದವರಿಗೆ ಹಾಗೂ ಎಲ್ಲಾ ಸಮುದಾಯಗಳಲ್ಲಿ ದ್ವಿತೀಯ ದರ್ಜೆಯ ಪ್ರಜೆಯನ್ನಾಗಿ ಕಾಣುತ್ತಿರುವ ಮಹಿಳೆಯರಿಗೆ. ಈ ವಿಚಾರದ ಬಗ್ಗೆ ನನ್ನ ಅನುಭವಕ್ಕೆ ಬಂದಂತೆ ಇಲ್ಲಿ ದಾಖಲಿಸಿದ್ದೇನೆ.

ನನ್ನದು ಮೂಲತಃ ಬಿಜಾಪುರ ಜಿಲ್ಲೆಯ ಶೇ. 0.1 ಶಿಕ್ಷಣದ ಸಾಕ್ಷರತೆ ಹೊಂದಿರುವ ಗೋನಾಳ ಎಸ್.ಎಚ್. ಗ್ರಾಮ. ನನ್ನ ತಂದೆ ತಾಯಿ ನಿರಕ್ಷರರು. ಮನೆಗೆ ದೊಡ್ಡ ಮಗಳು ನಾನು. ಹೆಣ್ಣುಮಕ್ಕಳಿಗೆ ಯಾಕೆ ಓದು ಎಂದು ತಾತ್ಸಾರ ಮಾಡುವವರ ನಡುವೆ ಪಿಎಚ್.ಡಿ.ವರೆಗೂ ವಿದ್ಯಾಭ್ಯಾಸವನ್ನು ಮುಂದುವರಿಸಲು ನನಗೆ ಬೆನ್ನೆಲುಬು ಆಗಿ ನಿಂತಿದ್ದು ಅಂಬೇಡ್ಕರ್ ಅವರು ನೀಡಿದ ಸಂವಿಧಾನ. ಇಂದು ಘನತೆಯಿಂದ ಎಲ್ಲರಂತೆಯೇ ನಾನು ಬದುಕಲು ಕಾರಣವಾಗಿರುವುದು ಸಂವಿಧಾನದಲ್ಲಿ ನೀಡಿದ ಶಿಕ್ಷಣದ ಹಕ್ಕು, ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕು, ಇಚ್ಛೆಯಂತೆ ಜೀವಿಸುವ ಹಕ್ಕು.

ಈ ಹಕ್ಕುಗಳ ಕಾರಣದಿಂದಾಗಿ ಬಾಲ್ಯವಿವಾಹಕ್ಕೆ ಒಳಗಾಗಬೇಕಿದ್ದ ನಾನು ಸಹಾಯಕ ಪ್ರಾಧ್ಯಾಪಕಿಯಾಗಿ ಘನತೆಯಿಂದ ಬದುಕು ಕಟ್ಟಿಕೊಂಡಿದ್ದೇನೆ; ನನ್ನೂರಿನ ಹೆಣ್ಣುಮಕ್ಕಳಿಗೆ ಓದಲು ಪ್ರೋತ್ಸಾಹಿಸುವ ನೆಲೆಯಲ್ಲಿ ನಿಂತಿದ್ದೇನೆ. ನನಗೆ ಸಂವಿಧಾನ ನೀಡಿದ ಆತ್ಮವಿಶ್ವಾಸ, ಬದುಕುವ ಛಲ, ಪ್ರತಿ ದಿನ ಊಟ ಮಾಡುವಾಗಲೂ ನೆನಪಿಸಿಕೊಳ್ಳುತ್ತೇನೆ.

ನಾನು ಶ್ರಮಿಸುತ್ತೇನೆ. ಅತ್ಯಂತ ಬಡವರು ಸಹ ಇದು ತಮ್ಮ ದೇಶ ಎಂದು ಭಾವಿಸುವ, ರಾಷ್ಟ್ರ ನಿರ್ಮಾಣದಲ್ಲಿ ತಮ್ಮ ಧ್ವನಿಯನ್ನು ಅಭಿವ್ಯಕ್ತಗೊಳಿಸುವ, ಯಾವುದೇ ಉನ್ನತ ಅಥವಾ ಕೆಳ ವರ್ಗಗಳಿಲ್ಲದ, ಎಲ್ಲ ಸಮುದಾಯಗಳು ಪೂರ್ಣ ಪ್ರಮಾಣದ ಸಾಮರಸ್ಯದಿಂದ ಜೀವಿಸುವ ಭಾರತಕ್ಕಾಗಿ ನಾನು ಕೆಲಸ ಮಾಡುತ್ತೇನೆ. ಇಂತಹ ಭಾರತದಲ್ಲಿ ಅಸ್ಪೃಶ್ಯತೆ ಇಲ್ಲವೇ ಅಮಲೇರಿಸುವ ಪಾನೀಯಗಳು ಮತ್ತು ಮಾದಕದ್ರವ್ಯದ ಅಪಾಯಗಳಿಗೆ ಅವಕಾಶ ಇರಬಾರದು. ಪುರುಷರಿಗೆ ಇರುವ ಹಕ್ಕುಗಳು ಮಹಿಳೆಯರಿಗೂ ಇರಬೇಕು. ಬೇರೆ ಯಾವುದರಿಂದಲೂ ನಾನು ಸಂತೃಪ್ತನಾಗುವುದಿಲ್ಲ.''

ಸಂವಿಧಾನದ ಕುರಿತು 1931ರಲ್ಲಿ ಗಾಂಧೀಜಿ ದಾಖಲಿಸಿದ ಅಭಿಪ್ರಾಯ, 1950ರ ಸ್ವತಂತ್ರ ಭಾರತದಲ್ಲಿ 'ಸಂವಿಧಾನ'ವಾಗಿ ಸಾಕಾರಗೊಂಡಿತು. ಈ ದೇಶದ ಸಂವಿಧಾನ ಎನ್ನುವುದು, ಕಾನೂನು ಕಟ್ಟಲೆಗಳ ಕಟ್ಟಷ್ಟೇ ಆಗಿರದೆ, ಸಮಾಜದಲ್ಲಿನ ತರತಮಗಳ ನಿವಾರಣೆಗಾಗಿ ಶ್ರಮಿಸಿದ ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್‌ರಂಥ ದೀಪಸಾಲುಗಳನ್ನು ಸದಾ ಜೀವಂತವಾಗಿರಿಸುವ ಪ್ರಯತ್ನವಾಗಿದೆ.



## ಹಲವು ವಿಶೇಷಗಳ ಸಂಕಲನ

ಭಾರತ ಸಂವಿಧಾನ ಹಲವು ವಿಶೇಷಗಳ ಸಂಕಲನ. ವಿಶ್ವದ ಬಹುದೊಡ್ಡ ಲಿಖಿತ ಸಂವಿಧಾನ ನಮ್ಮದು. ಮೂಲತಃ 392 ವಿಧಿಗಳು, 22 ಭಾಗಗಳು ಹಾಗೂ 12 ಪರಿಚ್ಛೇದಗಳನ್ನು ಒಳಗೊಂಡ ಉದ್ಗ್ರಂಥವಿದು.

ಸಂವಿಧಾನದ ಮೂಲಪ್ರತಿಗಳ ಭಾಷೆ ಇಂಗ್ಲಿಷ್ ಮತ್ತು ಹಿಂದಿ. ಪ್ರೇಮ್ ಬೆಹಾರಿ ನರೇನ್ ರೈಜಾದಾ ಅವರ ಕೈಬರಹದಲ್ಲಿ (ಕ್ಯಾಲಿಗ್ರಫಿಯಲ್ಲಿ) ವಿನ್ಯಾಸಗೊಂಡಿರುವ ಸಂವಿಧಾನಕ್ಕೆ ನಂದಲಾಲ್ ಬೋಸ್ ಹಾಗೂ ಶಾಂತಿನಿಕೇತನದ ಕಲಾವಿದರ ಕಲಾಕೃತಿಗಳು ಮೆರುಗು ನೀಡಿವೆ.

ಸಂವಿಧಾನದ ಮೂಲಪ್ರತಿ ಸಾಂವಿಧಾನಿಕವಾಗಿ ದೊರೆಯುವ ಮೂಲಭೂತ ಹಕ್ಕುಗಳ ಕುರಿತಷ್ಟೇ ಹೇಳಿದೆ. ಈ ಹಕ್ಕುಗಳ ಜೊತೆಗೆ, 1976ರಲ್ಲಿ 42ನೇ ತಿದ್ದುಪಡಿಯ ಮೂಲಕ 'ಮೂಲಭೂತ ಕರ್ತವ್ಯ'ಗಳನ್ನು ಸೇರಿಸಲಾಯಿತು. 51–ಎ ವಿಧಿಯಲ್ಲಿ ಹತ್ತು ಕರ್ತವ್ಯಗಳನ್ನು ಪಟ್ಟಿಮಾಡಲಾಗಿದ್ದು, 2002ರಲ್ಲಿ 86ನೇ ತಿದ್ದುಪಡಿಯ ಮೂಲಕ ಹನ್ನೊಂದನೇ ಕರ್ತವ್ಯವನ್ನು ಸೇರ್ಪಡೆ ಮಾಡಲಾಯಿತು.

ಸಮಾನತೆಯ ಹಕ್ಕು, ಸ್ವಾತಂತ್ರ್ಯದ ಹಕ್ಕು, ಶೋಷಣೆಯ ವಿರುದ್ಧದ ಹಕ್ಕು, ಧರ್ಮದ ಸ್ವಾತಂತ್ರ್ಯದ ಹಕ್ಕು, ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಕ್ಕುಗಳು, ಸಾಂವಿಧಾನಿಕ ಪರಿಹಾರಗಳ ಹಕ್ಕು – ಇವು ಸಂವಿಧಾನ ನಮಗೆ ಕೊಡಮಾಡಿರುವ ಹಕ್ಕುಗಳಾಗಿವೆ. ಸಂವಿಧಾನ ಪಟ್ಟಿ ಮಾಡಿರುವ ಹನ್ನೊಂದು ಕರ್ತವ್ಯಗಳು ಕೆಳಗಿನಂತಿವೆ:

1. ಸಂವಿಧಾನಕ್ಕೆ ಬದ್ಧವಾಗಿರುವುದು. ಅದರ ಆಶಯಗಳನ್ನು ಗೌರವಿಸುವುದು. ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು.
2. ಸ್ವಾತಂತ್ರ್ಯ ಹೋರಾಟಕ್ಕೆ ಸ್ಫೂರ್ತಿಯಾಗಿದ್ದ ಉದಾತ್ತ ಆದರ್ಶಗಳನ್ನು ಗೌರವಿಸುವುದು ಮತ್ತು ಪಾಲಿಸುವುದು.
3. ಭಾರತದ ಸಾರ್ವಭೌಮತ್ವ, ಅಖಂಡತೆ ಮತ್ತು ಏಕತೆಯನ್ನು ಎತ್ತಿ ಹಿಡಿಯುವುದು ಮತ್ತು ರಕ್ಷಿಸುವುದು.
4. ದೇಶವನ್ನು ರಕ್ಷಿಸುವುದು ಮತ್ತು ದೇಶಸೇವೆಗೆ ಕರೆ ಬಂದಾಗ ಸೇವೆ ಸಲ್ಲಿಸುವುದು.
5. ವಿವಿಧ ಮತ–ಪಂಥ, ಭಾಷೆ, ಪ್ರಾಂತ್ಯಗಳ ಭೇದಭಾವಗಳಿಂದ ಹೊರಬಂದು, ಸಹೋದರತ್ವ, ಸೌಹಾರ್ದದಿಂದ ಇರುವುದು. ಮಹಿಳೆಯರಿಗೆ ಅಗೌರವ ತೋರುವ ಆಚರಣೆಗಳನ್ನು ತಿರಸ್ಕರಿಸುವುದು.
6. ನಮ್ಮ ವೈವಿಧ್ಯಮಯ ಸಂಸ್ಕೃತಿ, ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು.
7. ದೇಶದ ಕಾಡು, ವನ್ಯಜೀವಿಗಳು, ನದಿಗಳು ಸೇರಿದಂತೆ ಪರಿಸರವನ್ನು ಉಳಿಸಿ ಬೆಳೆಸುವುದು.
8. ವೈಜ್ಞಾನಿಕ ಮನೋಧರ್ಮವನ್ನು ಬೆಳೆಸುವುದು. ಪ್ರಶ್ನೆ ಮಾಡುವ ಮತ್ತು ಬದಲಾವಣೆಗೆ ಒಡ್ಡಿಕೊಳ್ಳುವ ಮನಸ್ಥಿತಿ ಬೆಳೆಸಿಕೊಳ್ಳುವುದು.
9. ಸಾರ್ವಜನಿಕ ಆಸ್ತಿಯನ್ನು ರಕ್ಷಿಸುವುದು. ಹಿಂಸೆಯನ್ನು ತೊರೆಯುವುದು.
10. ವೈಯಕ್ತಿಕ, ಸಾಮೂಹಿಕ ಚಟುವಟಿಕೆಗಳಲ್ಲಿ ಉನ್ನತಿ ಸಾಧಿಸಲು ಪ್ರಯತ್ನಿಸಿ ದೇಶದ ಪ್ರಗತಿಗಾಗಿ ಶ್ರಮಿಸುವುದು.
11. ಎಲ್ಲಾ ತಂದೆ–ತಾಯಿಯರು/ ಪಾಲಕರು/ ಪೋಷಕರು ತಮ್ಮ 6ರಿಂದ 14 ವರ್ಷ